ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ನಾವು ಒಂದು ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಕಳೆದ ಒಂದು ತಿಂಗಳಲ್ಲಿ ಬೆಂಗಳೂರಿನಲ್ಲಿ ದಿನಕ್ಕೊಂದರಂತೆ ಮರ್ಡರಾಗಿವೆ. ಕೇವಲ ಬೆಂಗಳೂರಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅದರ ಬಗ್ಗೆ ಪ್ರಸ್ತಾಪ ಮಾಡುವುದು ಅವಶ್ಯ ಇದೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ, ಈ ದಿವಸ ಎರಡು ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ತಮ್ಮಲ್ಲಿ ವಿನಂತಿಸಿಕೊಂಡಿದ್ದೇವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಕಳುಹಿಸಿರುವ ನಿಲುವಳಿ ಸೂಚನೆ ಹಾಗೂ ಬೆಂಗಳೂರಿನಲ್ಲಿ ಮರ್ಡರ್ಸ್ ಹೆಚ್ಚುತ್ತಿರುವ ಬಗ್ಗೆ ಹೆಚ್ಚುತ್ತಿರುವ ಕ್ರಿಮಿನಲ್ ಚಟುವಟಿಕೆ ಬಗ್ಗೆ ಚರ್ಚೆಯಾಗಬೇಕೆಂದು ನಾವು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಇದರ ಮಂಡನೆಗೆ ಪ್ರಶ್ನೋತ್ತರದ ಮೇಲೆ ನಂತರ ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತೊಂದು ನಿಯಮ 69ರ ಅಡಿಯಲ್ಲಿ ಡಾ|| ರಾಜಕುಮಾರ್ ಅಪಹರಣದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ತಮಗೆ ಮನವಿ ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಮನವಿ ಮಾಡಿದ್ದಾರೆ. ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ನಮ್ಮನ್ನೆಲ್ಲ ಕರೆಸಿ ಒಂದೆರಡು ದಿವಸದಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ. ಈಗ ಸುಪ್ರೀಂ ಕೋರ್ಟ್ ತೀರ್ಪು ಪತ್ರಿಕೆಗಳಲ್ಲೆಲ್ಲ ಪ್ರಕಟವಾಗಿದೆ. ಅದರ ನಕಲು ಸರ್ಕಾರಕ್ಕೆ ಈಗಾಗಲೇ ಬಂದಿರಲಿಕ್ಕೆ ಸಾಕು. ಈ ಮಧ್ಯೆ ಒಂದು ಆಶ್ಚರ್ಯಕರ ಬೆಳವಣಿಗೆ ಆಗಿರುವುದೇನೆಂದರೆ ತಮಿಳುನಾಡಿನ ವಿಧಾನಸಭೆಯಲ್ಲಾದ ಚರ್ಚೆ ಆಧಾರದ ಮೇಲೆ ಸಂವಿಧಾನಕಾರರಾಗಿ ಹೋಗಬೇಕೆಂದಿದ್ದ ಶ್ರೀ ನೆಡುಮಾರನ್ ಈಗ ಕಾಡಿಗೆ ಹೋಗುವುದಿಲ್ಲ ಎಂದಿದ್ದಾರೆ. ಹಾಗಾದರೆ ನೆಡುಮಾರನ್ ಸ್ಥಾನದಲ್ಲಿ ಗೋಪಾಲ್‌ರನ್ನು ಕಳಿಸುವಿರೋ, ಸರ್ಕಾರದ ಕಾರ್ಯಕ್ರಮಗಳೇನು ಎಂಬ ಬಗ್ಗೆ ಪತ್ರಿಕೆಗಳ ಮೂಲಕ ತಿಳಿದುಕೊಳ್ಳುವ ಪರಿಸ್ಥಿತಿ ಬಂದಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಗೃಹ ಸಚಿವರು ಹೊರಗಡೆಯೇ ಎಲ್ಲಾ ಹೇಳುತ್ತಿದ್ದಾರೆ. ಇಲ್ಲಿ ಯಾವ ವಿಷಯಗಳನ್ನು ಚರ್ಚೆ ಮಾಡಲು ಆಗುವುದಿಲ್ಲವೋ ಅದನ್ನು ಚರ್ಚಿಸಲು ನಾವೂ ತಯಾರಿಲ್ಲ. ನಮ್ಮ ಮಾನ್ಯ ಸೋಮಶೇಖರ್‌ರವರು ಈ ಚರ್ಚೆಯಲ್ಲಿ ವಿಶೇಷವಾಗಿ ಭಾಗವಹಿಸಿ, ಇದರಲ್ಲಿ ಸರ್ಕಾರ ಮಾಡಿರುವ ವೈಫಲ್ಯಗಳನ್ನು ಎತ್ತಿ ತೋರಿಸಬೇಕೆಂದು ಬಹಳ ಕಾತರದಿಂದಿದ್ದಾರೆ. ನಮ್ಮ ಕಡೆಯ ಇತರ ಸದಸ್ಯರೂ ಕಾತರದಿಂದಿದ್ದಾರೆ. ಆದ್ದರಿಂದ ನಾವುಗಳು ಮನವಿ ಮಾಡುವುದೇನೆಂದರೆ, ಸರ್ವಪಕ್ಷ ಸಭೆಯನ್ನು ಇವತ್ತು ಸಂಜೆ ಅಥವಾ ನಾಳೆ ಬೆಳಿಗ್ಗೆ ತುರ್ತಾಗಿ ತಾವು ಕರೆಯಬೇಕು. ಏಕೆಂದರೆ ಇಡೀ ರಾಜ್ಯದ ರಾಷ್ಟ್ರದ ಜನ ಆತಂಕದಲ್ಲಿದ್ದಾರೆ. ಇವತ್ತು ಕಾನೂನು ವ್ಯವಸ್ಥೆ ಕೆಟ್ಟು ಹೋಗಿ 12 ಗಂಟೆಗಳ ಕಾಲ ಕೆಲಸ ಮಾಡಬೇಕಾದ ಪೋಲೀಸರು 24 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಶ್ರೀ ನೆಡುಮಾರನ್ ಇಲ್ಲ ಎಂದ ತಕ್ಷಣ ಎಲ್ಲರೂ ಭಯಭೀತರಾಗಿದ್ದಾರೆ. ನೆಡುಮಾರನ್

ಹೋಗುವುದಿಲ್ಲ ಎಂಬುದು everyday the crisis is deepening ಎಂಬುದಕ್ಕೆ ಉದಾಹರಣೆ. Government is unable to guess what is going to happen. They have not been able to anticipate what is going to happen. ನಾವು ಅಲ್ಟರ್ನೇಟ್ ವ್ಯವಸ್ಥೆ ಮಾಡಿ ಎಂದರೆ ಇಲ್ಲ, ಆಲ್ಟರ್ನೇಟ್ ವ್ಯವಸ್ಥೆ ಮಾಡಲು ಆಗುವುದಿಲ್ಲ ಎನ್ನುತ್ತಾರೆ. What are the options before us? People of the State would like to know. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಬಗ್ಗೆ ಚರ್ಚೆಗೆ ನಿಯಮ 69ರಡಿಯಲ್ಲಿ ನಮಗೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರಿಗೆ ಅವಕಾಶ ಮಾಡಿಕೊಡಿ. ಮತ್ತು ಸರ್ವಪಕ್ಷಗಳ ಸಭೆಯನ್ನು ಇವತ್ತೇ ಕರೆಯಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಚರ್ಚೆಗೆ ಸರ್ಕಾರ ಸಿದ್ಧವಿದೆ, ಅದರಲ್ಲೇನು ಹಿಂದೆಮುಂದೆ ನೋಡುವುದಿಲ್ಲ. ನೀವು ಲೋಪದೋಷ ಎತ್ತಿ ತೋರಿಸಿದಾಗ ಸರಿಪಡಿಸಿಕೊಳ್ಳುವುದಿದ್ದರೆ ಖಂಡಿತ ಸರಿಪಡಿಸಿಕೊಳ್ಳೋಣ. ಸುಪ್ರೀಂ ಕೋರ್ಟಿನ ತೀರ್ಪಿನ ಸರ್ಟಿಫೈಡ್ ಕಾಪಿ ನಮಗಿನ್ನೂ ಸಿಕ್ಕಿಲ್ಲ. ಅದನ್ನು ಪಡೆದುಕೊಳ್ಳಲು ನಾವು ನಮ್ಮ ಅಡ್ವೊಕೇಟ್ ಜನರಲ್‌ರಿಗೆ ಹೇಳಿದ್ದೇವೆ. ಬರೀ ಆಪರೇಟಿವ್ ಪೋರ್ಶನ್ ಸಿಕ್ಕಿದೆ, ಪೂರಾ ತೀರ್ಪಿನ ಪ್ರತಿ ಸಿಗುವವರೆಗೆ ಅದರಲ್ಲೇನಿದೆ, ಏನಿಲ್ಲವೆಂದು ಹೇಳಲು ಕಷ್ಟವಾಗುತ್ತದೆ. ಅದಕ್ಕಾಗಿಯೇ ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆ ಸ್ಪಷ್ಟಪಡಿಸಿದ್ದಾರೆ; ಆ ಕಾಪಿ ಬಂದ ತಕ್ಷಣ ನಾನು ಎಲ್ಲರನ್ನೂ ಕರೆಸಿ ಮಾತನಾಡುತ್ತೇನೆ ಮತ್ತು ನಿಮ್ಮನ್ನು ಕೇಳಿಕೊಂಡೇ ಮುಂದಿನ ಹೆಜ್ಜೆ ಇಡುತ್ತೇನೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ಅವರು ಹುಷಾರಿಲ್ಲದ ಕಾರಣ 12 ಗಂಟೆಗೆ ಬರುತ್ತಾರೆ. ಅವರಿಗೆ ಯಾವಾಗ ಬಿಡುವಾಗುತ್ತದೆ ಆಗ ಖಂಡಿತವಾಗಿ ಸಭೆ ಸೇರುತ್ತೇವೆ. ಸಭೆ ಸೇರಿಸುವುದಕ್ಕೆ, ನಿಮ್ಮ ಸಲಹೆ ಕೇಳುವುದಕ್ಕೆ ನಮಗೇನೂ ಅಲರ್ಜಿ ಇಲ್ಲ. ಒಂದು ಸಲವಲ್ಲ, ಅನೇಕ ಬಾರಿ ನಾವೆಲ್ಲರೂ ಕೂಡ ಸಭೆ ಸೇರಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಕ್ರೈಸಿಸ್ ಯಾವರೀತಿ ಡೀಪೆನ್ ಆಗುತ್ತಿದೆ ಎಂದು ಹೇಳಿದರೆ ಈಗ ನೆಡುಮಾರನ್ has refused to go. This is another development ನಾವು ಇಲ್ಲಿ ಕುಳಿತೆ ಇದ್ದೇವೆ. ದಿನವೂ ಒಂದೊಂದು ಡೆವಲಪ್‌ಮೆಂಟ್‌ಗಳಾಗುತ್ತಲೇ ಇರುತ್ತವೆ. ಜನ ನಮ್ಮ ಬಗ್ಗೆ ಏನು ಅಂದುಕೊಳ್ಳುವುದಿಲ್ಲ? ಇವರು ಉಸಿರು ಎತ್ತುತ್ತಲೇ ಇಲ್ಲ, ಏನೂ ಮಾತನಾಡುತ್ತಿಲ್ಲವೆಂದು ಅವರಿಗೆ ಭಾವನೆ ಬರುತ್ತದೆ. ನಮ್ಮ ಕಡೆ ಮಾನ್ಯ ಸೋಮಶೇಖರ್‌ರವರು ಮತ್ತು ಇನ್ನೂ ಅನೇಕ ಸದಸ್ಯರುಗಳು ಇದರ ಬಗ್ಗೆ ಮಾತನಾಡುವವರಿದ್ದಾರೆ. ಸರ್ಕಾರದ ವೈಫಲ್ಯತೆಗಳು ಏನು? ಎಲ್ಲಿ ತಪ್ಪಿದೆ? ಎಲ್ಲಿ ಎಡವಿದ್ದೇವೆ, ಏನು ಎನ್ನುವುದನ್ನು ಎತ್ತಿ ತೋರಿಸಿ, ಮುಂದೆ ಈ ರೀತಿ ತಪ್ಪುಗಳಾಗದೇ ಇರುವ ಹಾಗೆ ಮಾಡಬೇಕೆನ್ನುವ ಉದ್ದೇಶವನ್ನೂ ಕೂಡ ನಾವು ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ನಾನು ಈಗಾಗಲೇ ಸ್ಪಷ್ಟಮಾಡಿದ್ದೇನೆ. ಅದರ ಜೊತೆಗೆ ನಿಮಗೆ ಸರ್ವ ಪಕ್ಷಗಳ ಸಭೆಯನ್ನು ಕರೆಯಲಿಕ್ಕೆ ತೊಂದರೆಯೇನು? ನಿನ್ನೆ ಹೇಳಿದ ಹಾಗೆ ಇವತ್ತು ಬೆಳಿಗ್ಗೆ ಸಭೆ ಕರೆಯುತ್ತೀರಿ ಎಂದು ನಾವೆಲ್ಲ ಅಂದುಕೊಂಡಿದ್ದೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ : 12 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಅವರು ಬಂದಮೇಲೆ ನಾವು ಕುಳಿತು ಮೀಟಿಂಗ್ ಮಾಡಿ ಸರ್ವ ಪಕ್ಷದ ಸಭೆಯನ್ನು ಸೇರಿ ಮುಂದಿನ ಕ್ರಮವನ್ನು ಜರುಗಿಸೋಣ. ತಮ್ಮನ್ನು ಕರೆಸಬಾರದು ಎಂದು ಯಾರದೂ ಅಭಿಪ್ರಾಯ ಇಲ್ಲ. ಅಥವಾ ಕರೆಸುವುದಿಲ್ಲ ಎಂದು ನಾವು ಎಂದೂ ಕೂಡ ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಿಲುವಳಿ ಸೂಚನೆಯಲ್ಲಿ ಆ ವಿಷಯದ ಬಗ್ಗೆಯೂ ಪ್ರಸ್ತಾಪವಿದೆ. ನಿನ್ನೆ ಜಡ್ಜಮೆಂಟ್ ಆದತಕ್ಷಣ ಎಲ್ಲರನ್ನೂ ಕರೆದು ಮಾತನಾಡೋಣ ಎಂದು ನಿರ್ಧಾರ ಆಯಿತು. ಪ್ರತಿಯೊಂದು ದಿವಸಕ್ಕೂ ಡೆವಲಪ್‌ಮೆಂಟ್ಸ್ ಬೇರೆ ಬೇರೆಯಾಗುತ್ತಿದೆ.

ಅಧ್ಯಕ್ಷರು : ಸರ್ಟಿಫೈಡ್ ಕಾಪಿ ಇಲ್ಲದೇ ಯಾವುದರ ಮೇಲೆ ಮಾತನಾಡುವುದಕ್ಕಾಗುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸರ್ಟಿಫೈಡ್ ಕಾಪಿ ಬಗ್ಗೆ ಮಾನ್ಯ ಗೃಹಮಂತ್ರಿಗಳು ಹೇಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಸರ್ಟಿಫೈಡ್ ಕಾಪಿಯದು ಪ್ಯಾರಾಮೀಟರೇ ಬೇರೆ. ಮಾನ್ಯ ಸೋಮಶೇಖರ್‌ರವರು ಮಾತನಾಡಬೇಕಾದ್ದು ರಾಜ್ಯದಲ್ಲಿ ಆಗಿರುವ ಅನಾಹುತದ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವುಗಳು ಎಷ್ಟು ದಿವಸ ಮಾತನಾಡುತ್ತೀರೋ ಮಾತನಾಡಿ, ನಾವು ಕೇಳುವುದಕ್ಕೆ ತಯಾರಿದ್ದೇವೆ. ಅದಕ್ಕೆ ತಕ್ಕಂತೆ ಉತ್ತರ ಕೊಡುವುದಕ್ಕೂ ಸಿದ್ಧರಿದ್ದೇವೆ. ಅದಕ್ಕೇನೂ ನಾವು ಹೆದರುವುದಿಲ್ಲ. ಆದರೆ ಇಲ್ಲಿ ನಡೆದಂಥಾದ್ದು ಏನು? ನೀವು ನಾವು ಕೂಡಿ ಒಪ್ಪಿಕೊಂಡಂಥ ಮಾತೇನು? ನಾವು ಚರ್ಚೆ ಬೇಡ ಎಂದು ಹೇಳಿದ್ದೇವೆಯೇ? ಚರ್ಚೆ ಮಾಡಿ ಎಂದು ಹೇಳಿಯೇ ನಿಮ್ಮನ್ನು ಕರೆದಿದ್ದೇವೆ. ಇನ್ನು ಬೇಕಾದರೆ ಎಂಟು ಹತ್ತು ದಿವಸ ಕೂಡೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಸರ್ವ ಪಕ್ಷಗಳ ಸಭೆ ಕರೆಯುವುದು, ಅದನ್ನು ಇಲ್ಲಿಯವರೆಗೂ ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಸರ್ಕಾರದ ವೈಫಲ್ಯತೆಯ ಬಗ್ಗೆ ಚರ್ಚೆಯಾಗದಿದ್ದರೆ ಅವರು ಯಾವಾಗ ಅಲರ್ಟ್ ಆಗುತ್ತಾರೆ? ಈಗ ಸಾಕಷ್ಟು ಪರ್ಯಾಯ ಮಾರ್ಗ ಎಲ್ಲಾ ಹೇಳಿದ್ದೇವೆ. ಸರ್ಕಾರಕ್ಕೆ ಸರಿಯಾದ ಡಿಸಿಷನ್‌ನನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನು ಪರ್ಯಾಯ ಮಾರ್ಗ ಹೇಳಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಈ ಸರ್ಕಾರವನ್ನು ಹೆದರಿಸುವುದಕ್ಕೆ ವೀರಪ್ಪನ್‌ಗೆ ಮಾತ್ರ ಸಾಧ್ಯ. ಇನ್ಯಾರು ಹೆದರಿಸುತ್ತಾರೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಏನು ಮಾಡುತ್ತೀರೋ ಅದನ್ನೇ ನಾವು ಮಾಡುವುದು. ನಾವು ಮಾಡಿದ್ದನೇ ನೀವೂ ಮಾಡುವುದು.

ಅಧ್ಯಕ್ಷರು : ಒಬ್ಬರು ಮಾತನಾಡುವುದನ್ನು ಮಾತ್ರ ಬರೆಯಿರಿ. ಇಬ್ಬರು ಮೂವರು ಮಾತನಾಡಿದರೆ ಬರೆಯಬೇಡಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ವಿಚಾರ. ನಾವು ಈ ವಿಚಾರವನ್ನು ಸದನ ನಡೆಯುವಾಗಲೂ ಬಹಳ ಹಗುರವಾಗಿ ತೆಗೆದುಕೊಂಡಿದ್ದೇವೆ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಮೂಡುತ್ತಿದೆ. ಕಾರಣವೇನೆಂದರೆ ಅಪಹರಣವಾಗಿರುವ ವ್ಯಕ್ತಿ ನಮ್ಮ ರಾಜ್ಯದ ಪ್ರತಿಷ್ಠಿತ ವ್ಯಕ್ತಿ. ಅವರು ಕಾಡಿಗೆ ಹೋಗಿ ಮೂರು ತಿಂಗಳಾಗಿದೆ. ತಮಿಳುನಾಡಿನಲ್ಲಿ ನಿನ್ನೆ ತಾನೆ ವಿಧಾನಸಭೆ ನಡೆಯುವಾಗ ದೊಡ್ಡ ಗೊಂದಲವಾಗಿದೆ. ಈಗಾಗಲೇ ವಿರೋಧಪಕ್ಷದವರು ಅಲ್ಲಿ ಗಲಾಟೆ ಮಾಡಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿದ್ದಾರೆ. ನಾವು ಇಲ್ಲಿ ಸದನ ನಡೆಯುವಾಗ ಸುಪ್ರೀಂ ಕೋರ್ಟ್‌ನವರು ಅನೇಕ ರೀತಿಯಲ್ಲಿ ನಮ್ಮ ಸರ್ಕಾರವನ್ನು ಟೀಕೆ ಮಾಡಿರುವುದು, ಅದರ ಬಗ್ಗೆ ಕಾಪಿ ಬರುವತನಕ ಕಾಯಬೇಕಾದ ಅವಶ್ಯಕತೆ ಇಲ್ಲ. ಈಗಾಗಲೇ ಪತ್ರಿಕೆಗಳಲ್ಲಿ ಏನೇನು ಹೇಳಿದ್ದಾರೆ. ಯಾವರೀತಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಏನು ಜಡ್ಜ್‌ಮೆಂಟನ್ನು ಕೊಟ್ಟಿದ್ದಾರೆ ಎಂದು ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಈಗ ಸದನ ನಡೆಯದೆ ಇರುವಾಗ ಎಲ್ಲಾ ಸರ್ವ ಪಕ್ಷಗಳ ಸಭೆಯನ್ನು ಕರೆದು ಮಾತನಾಡುವುದು ಸರಿ. ಇವತ್ತು ಸದನ ನಡೆಯುತ್ತಿದೆ. ಆದರೂ ಮಾನ್ಯ ಮುಖ್ಯಮಂತ್ರಿಗಳು ನಾವು ಸರ್ವ ಪಕ್ಷಗಳ ಸಭೆಯನ್ನು ಕರೆಯುತ್ತೇವೆ ಎಂದರೆ ಹೇಗೆ? ಸಾರ್ವಜನಿಕರು ಏನು ತಿಳಿದುಕೊಳ್ಳುವುದು ಬೇಡವೆಂತಲೇ? ಸದನ ನಡೆಯುವಾಗ ಚರ್ಚೆ ಮಾಡುವುದಕ್ಕೆ ಏನು ತೊಂದರೆ? ಆದ್ದರಿಂದ ದಯವಿಟ್ಟು ಈ ತಕ್ಷಣ ತಾವು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಬೇಕು. ಈ ವಿಚಾರದಲ್ಲಿ ಚರ್ಚೆಗೆ ಅವಕಾಶವನ್ನು ತಾವು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ಅವರಿಗೆ ಹುಷಾರು ಇಲ್ಲ, ಬರುತ್ತಾರೆಂದು ಹೇಳಿದ್ದೇನೆ. ಅವರನ್ನು ಕರೆಯಿಸಿ ಎಂದರೆ ಪರ್‌ಪಸ್‌ಲಿ ಅಬ್ಸೆಂಟ್ ಇದ್ದಾರೆಯೇ ಇಂಟೆನ್‌ಷನಲಿ, ಡೆಲಿಬರೇಟ್‌ಲಿ ಉತ್ತರ ಕೊಡಬಾರದು ಎಂದು ಇದ್ದಾರೆಯೇ ಅವರು ಈ ಸದನಕ್ಕೆ ಬಂದಷ್ಟು ಬಹುಶಃ ಹಿಂದಿನ ಮುಖ್ಯಮಂತ್ರಿಗಳು ಬರುತ್ತಿದ್ದರೋ ಇಲ್ಲವೋ ಎನ್ನುವುದನ್ನು ನೀವೇ ಹೇಳಬೇಕು. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಾನು ನಿಮಗೂ ಕೂಡ ಕೇಳಿಕೊಂಡಿದ್ದೇನೆ. ಅವರು ಬಂದ ಮೇಲೆ ಸರ್ವಪಕ್ಷದ ಸಭೆ ಯಾವಾಗ ಕರೆಸಬೇಕು, ಏನು ಎಂಬುದನ್ನು ಅವರು ಹೇಳುತ್ತಾರೆ. ಮತ್ತು ಸರ್ಟಿಫೈಡ್ ಕಾಪಿ ಇಲ್ಲದೆ ಚರ್ಚೆ ಮಾಡಬೇಕು ಅಥವಾ ಇದರ ಮೇಲೆ ನಾವು ಮಾತನಾಡಬೇಕು ಎಂದರೆ ಅದು ತಮಗೆ ಬಿಟ್ಟ ವಿಷಯ. ಇಲ್ಲಾ ತಾವುಗಳು ಮಾತನಾಡಿದರೂ ಸರಿ. ಅದರಿಂದ ನಮ್ಮ ಸಮಸ್ಯೆ ಬಗೆಹರಿಯುತ್ತದೆ ಎನ್ನುವ ಮಾತನ್ನು ಹೇಳಿದರೆ ಅದೂ ಸರಿ. ಅದಕ್ಕೆ ನಾವು ಎಲ್ಲಾ ವಿಷಯಕ್ಕೂ ತಯಾರಿದ್ದೇವೆ. ಚರ್ಚೆಗೂ ತಯಾರಿದ್ದೇವೆ. ನೀವು ಯಾವ ದಾರಿ ಹೇಳಿಕೊಡುತ್ತೀರಿ ಅದರ ಮೇಲೂ ನಡೆಯುವುದಕ್ಕೂ ತಯಾರಿದ್ದೇವೆ. ನಾವು ನೀವು ಯೋಚನೆ ಮಾಡಿದ ವಿಷಯವೇನೆಂದರೆ, ನಾವು ಮಾತನಾಡಿದರೆ, ಚರ್ಚೆ ಮಾಡಿದರೆ, ಅದರ ಪರಿಣಾಮ

ಏನಾಗಬಹುದು ಎನ್ನುವ ದೃಷ್ಟಿಯಿಂದಲೇ ನಾವು ಅನೇಕ ಸಾರಿ ಚರ್ಚೆಗಷ್ಟೇ ಅಲ್ಲ, ಪತ್ರಿಕೆಗೆ ಹೋಗಿ ಹೇಳುವಾಗ ಕೂಡ ಬಹಳ ಒಗ್ಗಟ್ಟಾಗಿ ಒಂದೇ ಸ್ವರದಿಂದ ಇವತ್ತು ಹೇಳಿಕೊಂಡು ಬಂದಿದ್ದೇವೆ. ಅದಕ್ಕೆ ನಾನು ತಮ್ಮೆಲ್ಲರನ್ನು ಅಭಿನಂದಿಸುತ್ತೇನೆ. ತಾವು ಸಹಕಾರ ಮಾಡಿಲ್ಲ, ಅಥವಾ ನಿಮ್ಮ ಸಹಕಾರ ನಮಗೆ ಸಿಕ್ಕಿಲ್ಲ, ನಿಮ್ಮ ಸಹಾಯ ನಮಗೆ ಸಿಕ್ಕಿಲ್ಲ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ತಾವು ಎಲ್ಲಾ ರೀತಿಯ ಸಹಕಾರ ನೀಡಿದಿರಿ, ಸಹಾಯ ಮಾಡಿದಿರಿ. ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ತಾವು ಸಲಹೆಗಳನ್ನು ಕೊಟ್ಟಿದ್ದೀರಿ. ನಿಮ್ಮೆಲ್ಲರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಜೊತೆ ಚರ್ಚೆ ಮಾಡಿ ಯಾವುದರಿಂದ ಒಳ್ಳೆಯದಾಗುತ್ತದೆ ಎನ್ನುವ ಮಾರ್ಗವನ್ನೇ ನಾವು ಎಲ್ಲರೂ ಕೂಡ ಅನುಸರಿಸಿಕೊಂಡು ಬಂದಿದ್ದೇವೆ. ಅವರ ಕುಟುಂಬದವರು ಕೂಡ ಆ ಮಾರ್ಗವೇ ಸರಿ ಎಂದು ಹೇಳಿ ಇಲ್ಲಿಯವರೆಗೆ ಅವರು ಕೂಡ ಹೇಳಿಕೊಂಡು ಬಂದಿದ್ದಾರೆ. ಆ ಒಂದು ಪರಿಸ್ಥಿತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿರೋಧಪಕ್ಷದ ನಾಯಕರುಗಳು ಸರ್ವಪಕ್ಷದ ಸದಸ್ಯರುಗಳು, ಪಾರ್ಲಿಮೆಂಟ್ ಸದಸ್ಯರುಗಳು, ಇಂಟೆಲೆಕ್ಚುಯಲ್ಸ್‌ಗಳು ಎಲ್ಲರೂ ಕೂಡ ಸಹಕರಿಸಿ ಒಂದು ದಿಕ್ಕಿನಲ್ಲಿ ಹೋಗಿದ್ದೇವೆ. ಅದು ತಮಿಳುನಾಡಿನಲ್ಲಿ ಆಗಲಿಲ್ಲ. ಅದಕ್ಕೆ ಬೇರೆ ಕಾರಣಗಳಿರಬಹುದು. ನಾನು ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗವುದಿಲ್ಲ ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಅವರು ಯಾವಾಗ ಕರೆಸುತ್ತಾರೆ, ಟೈಮ್‌ಡೇಟ್ ಫಿಕ್ಸ್ ಮಾಡಿ ನಾವು ತೆಗೆದುಕೊಳ್ಳೋಣ. ತಾವು ಚರ್ಚೆಗೂ ಕೂಡ ಡೇಟ್ ಟೈಮ್ ಫಿಕ್ಸ್ ಮಾಡಿದರೆ ಅದು ಕೂಡ ಮಾಡೋಣ.

ಶ್ರೀ ಎಸ್ ಶಿವಪ್ಪ (ಸಕಲೇಶಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದರು, ಸರ್ವ ಪಕ್ಷಗಳ ಸಭೆ ಕರೆದು ನಾವು ಅನೇಕ ಸಂದರ್ಭದಲ್ಲಿ ಮಾತನಾಡಿದ್ದೇವೆ ಎಂದು. ಸದನ ನಡೆಯದೇ ಇರುವ ಸಂದರ್ಭದಲ್ಲಿ ಎಲ್ಲಾ ಪಕ್ಷಗಳೂ ಮತ್ತು ಅಧಿಕಾರ ಹೊಂದಿರತಕ್ಕಂಥವರು ಮಾತನಾಡುವುದು ನಿಜ. ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಈಗ ಸದನ ನಡೆಯುತ್ತಿದೆ. ಅನೇಕ ಸದಸ್ಯರುಗಳು ನಾವು ಇವರು ಅಲ್ಲಿ ಏನು ಮಾತನಾಡಿದರು ಎನ್ನುವ ವಿಚಾರ ನಮಗೆ ಗೊತ್ತಾಗಿಲ್ಲ. ವಿರೋಧಪಕ್ಷದವರೇನು ಅವರಿಗೆ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ, ಆಡಳಿತ ಪಕ್ಷ ಏನು ಇವರ ಮುಂದೆ ಸಮಸ್ಯೆಗಳನ್ನು ಇಟ್ಟಿದೆ, ಇದರ ಬಗ್ಗೆ ಏನು ಚರ್ಚೆ ನಡೆದಿದೆ ಎನ್ನುವುದು ನಮಗೆ ಗೊತ್ತಿಲ್ಲ. ಅನೇಕ ಸದಸ್ಯರುಗಳು ಅದರಲ್ಲಿ ಭಾಗಿಗಳಾಗದೇ ಇರತಕ್ಕವರು ಇನ್ನು ಅನೇಕ ವಿಚಾರಗಳನ್ನು ಜನತೆಯ ಮುಂದೆ ಮತ್ತು ಸರ್ಕಾರದ ಮುಂದೆ ಇಡುವ ಶಕ್ತಿ ಇರುವ ಅನೇಕ ಯುವಕ ಮಿತ್ರರು ಇದ್ದಾರೆ. ಸದನದಲ್ಲಿ ಈ ವಿಷಯ ಚರ್ಚೆಯಾಗುವುದು ಒಳ್ಳೆಯದು. ಕೋರ್ಟಿನಲ್ಲಿದೆ ಎಂದು ಮೊದಲು ಹೇಳುತ್ತಿದ್ದರು, ಈಗ ಕೋರ್ಟಿನಲ್ಲಿ ಆ ವ್ಯವಹಾರ ಇಲ್ಲ.

ಅಧ್ಯಕ್ಷರು : 10-50 ಗಂಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ನನ್ನ ಜೊತೆಗೆ ದೂರವಾಣಿಯಲ್ಲಿ ಮಾತನಾಡಿದರು. ನನಗೆ ಮೈಯಲ್ಲಿ ಹುಷಾರು ಇಲ್ಲ. ಸಂಜೆಯೊಳಗೆ ಬರುತ್ತೇನೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಬಂದತಕ್ಷಣ ಆ ವಿಷಯ ತೆಗೆದುಕೊಳ್ಳೋಣ. ಈಗ ಇಲ್ಲಿ ಒಂದು ಪ್ರಕಟಣೆ ಇದೆ.